**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| ಸಿಸಿ:ನಂಬರ್ 69/2018 | ಸಿಡಬ್ಲ್ಯೂ -2 | ಪಿ.ಡಬ್ಲ್ಯೂ -2 |
|---|---|---|

ಸಾಕ್ಷಿದಾರರ ಹೆಸರು : ಕಿರಣ್
ತಂದೆಯ ಹೆಸರು : ಸುರೇಶ
ವಯಸ್ಸು : 33 ವರ್ಷ
ಉದ್ಯೋಗ : ಹೋಟೆಲ್ ಕೆಲಸ
ವಾಸ ಸ್ಥಳ : ಪಿಡಿಜಿ ಕೊಪ್ಪಲು ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.

ದಿನಾಂಕಃ 07.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ**

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ. ಅವರಲ್ಲಿ ಇನ್ನೋರ್ವ ಆರೋಪಿ ಅಶೋಕ ಈ ದಿವಸ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಚಾಸಾ 1 ಸುರೇಶ ನನ್ನ ತಂದೆ. ಚಾಸಾ 3 ಸರೋಜ ನನ್ನ ತಾಯಿ. ದಿನಾಂಕ 26-12-2018 ರಂದು ಬೆಳಗ್ಗೆ 9 ಗಂಟೆಗೆ ನಾನು, ನನ್ನ ತಂದೆ ಮತ್ತು ತಾಯಿ ಪಿಡಿಜಿ ಕೊಪ್ಪಲು ಗ್ರಾಮದಲ್ಲಿರುವ ನಮ್ಮ ಜಮೀನುಗಳಾದ ಸರ್ವೆ ನಂ. 77/7 ಮತ್ತು 77/8 ರಲ್ಲಿ ಕೆಲಸ ಮಾಡುತ್ತಿದ್ದೆವು. ಆರೋಪಿತರಲ್ಲಿ ಜ್ಯೋತಿ, ಸಣ್ಣೇಗೌಡ ಮತ್ತು ರವಿ ರವರು ಬೇರೆ ಗ್ರಾಮಕ್ಕೆ ಸೇರಿದವರಾಗಿದ್ದು ಅವರನ್ನು ಕರೆದುಕೊಂಡು ನಮ್ಮ ಜಮೀನಿನ ಹತ್ತಿರ ಬಂದರು. ಆರೊಪಿತರಾದ ಅಶೋಕ, ರವಿ ಮತ್ತು ಸಣ್ಣೇಗೌಡರವರು ನನಗೆ ಬಲಕಣ್ಣಿನ ಹುಬ್ಬಿನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದರು. ಆರೋಪಿತರು ನನ್ನ ತಾಯಿಗೆ ಹಲ್ಲೆ ಮಾಡಿ ಅವರ ಸೀರೆ ಮತ್ತು ರವಿಕೆಯನ್ನು ಹರಿದು ಹಾಕಿದರು. ಆರೋಪಿತರು ನನ್ನ ತಂದೆಗೆ ದೊಣ್ಣೆಯಿಂದ ಹಲ್ಲೆ ಮಾಡಿದರು. ಆರೋಪಿತರು ನಿಮ್ಮನ್ನು ಸಾಯಿಸುತ್ತೇವೆ ಎಂದು ಹೇಳಿದರು. ನಮ್ಮ ಗ್ರಾಮದವರಾದ ಲೊಕೇಶ ಮತ್ತು ಹನುಮೇಗೌಡರವರು ಜಗಳ ಬಿಡಿಸಿ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಪೊಲೀಸರು ಘಟನೆ ಬಗ್ಗೆ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಆರೋಪಿತರು ಹಲ್ಲೆ ಮಾಡಿದ ಮಚ್ಚು ಮತ್ತು ದೊಣ್ಣೆಯನ್ನು ಮತ್ತು ನನ್ನ ತಾಯಿಯ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ.

ಸದರಿ ವಸ್ತುಗಳ ಗುರುತಿಸುವಿಕೆಯ ಬಗ್ಗೆ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.